<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ.ಸಂಖ್ಯೆ:**1686/2025**</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

<u>ಆರೋಪಿ</u> : ಪೂರ್ಣೇಶ ಕೆ.ಕೆ.,
ವಯಸ್ಸು ಸುಮಾರು 62 ವರ್ಷ,
ಬಿನ್ ಕೃಷ್ಣೇಗೌಡ ಕೆ.ಬಿ.,
ವಾಸಃ ನಡುವಿನಮಾಡ್ಕಲ್ ಗ್ರಾಮ,
ಮೂಡಿಗೆರೆ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀ ವಿಶ್ವನಾಥ್.ಎ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 12.04.2025 ರಂದು ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ತಾಲ್ಲೂಕು ಕಸಬಾ ಹೋಬಳಿ ನಡುವಿನಮಡ್ಕಲ್ ಗ್ರಾಮದ ಸರ್ವೆ ನಂ.27 ರಲ್ಲಿನ ತೋಟದ ಜಾಗದಲ್ಲಿ ಆರೋಪಿಯಾದ ನೀವು ಚಾಸಾ-3 ಮುತ್ತಪ್ಪ ರವರಿಗೆ ಮರಕಸಿ ಕೆಲಸಕ್ಕೆ ಜನರನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ಚಾಸಾ-3 ರವರು ತಮ್ಮ ಜೊತೆಯಲ್ಲಿ ಚಾಸಾ-1 ಕಿಶೋರ್ ಪಿ.ಎಲ್., ಚಾಸಾ-2 ಕಿರಣ್ ಮತ್ತು ಚಾಸಾ-4 ಪ್ರಶಾಂತ್ ರವರನ್ನು ಕರೆದುಕೊಂಡು ಹೋಗಿ ಅಂದು ಬೆಳಗ್ಗೆ 10.00 ರ ಸಮಯದಲ್ಲಿ ಆರೋಪಿಯಾದ ನೀವು ನಿಮ್ಮ ತೋಟದಲ್ಲಿರುವ ದೇವರಗುಡಿಯ ಹತ್ತಿರವಿದ್ದ ಸುಮಾರು 30 ಅಡಿ ಎತ್ತರ ಇರುವ ಕಾಡುಜಾತಿಯ ಮರಕ್ಕೆ ಚಾಸಾ-2 ರವರನ್ನು ಒತ್ತಾಯ ಪೂರ್ವಕವಾಗಿ, ಯಾವುದೇ ಸುರಕ್ಷಾ ಉಪಕರಣಗಳನ್ನು ನೀಡದೇ ಮರವನ್ನು ಹತ್ತಿಸಿದ್ದು, ಅದರಂತೆ ಚಾಸಾ-2 ರವರು ಮರವನು ಹತ್ತಿ ಮರಗಸಿ ಕೆಲಸ ಮಾಡುತ್ತಿರುವಾಗ ಸುಮಾರು 15 ಅಡಿ ಎತ್ತರದ ಮರದ ಮೇಲಿನಿಂದ ಬಿದ್ದು ಸೊಂಟದ ಹಿಂಭಾಗಕ್ಕೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(ಬಿ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಯಾವುದೇ ಸುರಕ್ಷಾ ಉಪಕರಣಗಳನ್ನು ನೀಡದೇ ಮರವನ್ನು ಹತ್ತಿಸಿದ್ದು, ಅದರಂತೆ ಚಾಸಾ-2 ರವರು ಮರವನ್ನು ಹತ್ತಿ

ಮರಗಸಿ ಕೆಲಸ ಮಾಡುತ್ತಿರುವಾಗ ಸುಮಾರು 15 ಅಡಿ ಎತ್ತರದ ಮರದ ಮೇಲಿನಿಂದ ಬಿದ್ದು ಅವರ ಎಡಕೈ ಜಾಯಿಂಟ್‌ಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(ಎ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರ: 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರ:

ಪ್ರ: 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

*(ದಿನಾಂಕ 23.10.2025 ರಂದು ಆರೋಪಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

**Sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.

ಮೂಡಿಗೆರೆ
ದಿನಾಂಕ: 23.10.2025